SC No. 160/2023
PW.-19

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 160/2023**

| | | |
|---|---|---|
| ಸಾಕ್ಷಿದಾರರ ಹೆಸರು | ಲೀಲಾವತಿ | ಪ್ರಮಾಣ ವಚನ ಮಾಡಿದ ದಿನಾಂಕ: **21.08.2025** |
| ತಂದೆಯ/ಗಂಡನ ಹೆಸರು | ಅನಂತ ಎಂ.ಎನ್ | |
| ವಯಸ್ಸು | 54 ವರ್ಷ | |
| ವೃತ್ತಿ | ಪಿ.ಎಸ್.ಐ, ಮಹಿಳಾ ಪೊಲೀಸ್ ಠಾಣೆ ಮೈಸೂರು | ಪ್ರಾ.ಸಾಃ 19 |
| ವಾಸ ಸ್ಥಳ | ಮೈಸೂರು | ಚಾ.ಸಾಃ 24 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ದೇವರಾಜ ಪೊಲೀಸ್ ಠಾಣೆಯಲ್ಲಿ *2019* ರಿಂದ *2023* ರವರೆಗೆ ಅಪರಾಧ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನು. ದಿನಾಂಕ *14.01.2022* ರಂದು ಮೃತ ಪ್ರಜ್ವಲ್ ರವರ ಶವ ತನಿಖೆಯನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಬೆಳಗ್ಗೆ *9.30* ರಿಂದ *11.30* ರ ವರೆಗೆ ಪಿಸಿ *599* ಕಿರಣ್ ರವರ ಸಹಾಯದಿಂದ ಬೆರಳಚ್ಚು ಮಾಡಿಸಿ ಸಹಿ ಪಡೆದಿರುತ್ತೇನೆ. ದಿನಾಂಕ *08.02.2022* ರಂದು ಪಿಸಿ *154* ಶಿವಲಿಂಗಯ್ಯ ರವರು ಮೃತ ಪ್ರಜ್ವಲ್ ಅವರ ಶವ ತನಿಖಾ ವರಧಿ ಹಾಗೂ ವೈದ್ಯರು ಸೀಲ್ ಮಾಡಿ ಕೊಟ್ಟ ಮಾಲುಗಳನ್ನು ತಂದು ಹಾಜರುಪಡಿಸಿ ವರದಿ ನೀಡಿದ್ದರು. ನಾನು ಅವುಗಳನ್ನು ಸ್ವೀಕರಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ *19/2022* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನು. ದಿನಾಂಕ

*09.02.2022* ರಂದು ಮಾಲುಗಳು ಆರ್.ಎಫ್.ಎಸ್.ಎಲ್ ನಿಂದ ಬಂದ ನಂತರ ನಾಶಪಡಿಸಲು ನ್ಯಾಯಾಲಯಕ್ಕೆ ಅನುಮತಿ ಕೋರಿರುತ್ತೇನೆ. ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-*25* ರವರಿಗೆ ಒಪ್ಪಿಸಿದ್ದೆನು. ಸಾಕ್ಷಿದಾರರು ಶವತನಿಖಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*7* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*7(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸಿಪಿಸಿ *154* ರವರ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*28* ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-*28(ಎ)* ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ** :

ಶವ ತನಿಖಾ ವರದಿಗೆ ಪಂಚರಾಗಿ ಸಹಿ ಮಾಡಿರುವವರು ಮೈಸೂರಿನವರು ಇರುತ್ತಾರೆ. ಅವರುಗಳು ಮಂಡಿ ಮೊಹಲ್ಲಾ, ಚಾಮರಾಜನಗರ ಮತ್ತು ತಲಕಾಡಿನವರು ಇರುತ್ತಾರೆ. ಅವರುಗಳೆಲ್ಲರೂ ಕೆಲಸಕ್ಕಾಗಿ ಮೈಸೂರಿಗೆ ಬಂದಿದ್ದರು. ಅವರುಗಳು ದಿನಗೂಲಿ ಕೆಲಸಗಾರರು ಇರುತ್ತಾರೆ ಎಂದರೆ ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಇರುವವರು ಇರುತ್ತಾರೆ. ಅದ್ವೈತ್ ಲಾಡ್ಜ್ ಹೋಟೇಲ್ ಮೈಸೂರಿನ ಹೃದಯ ಭಾಗದಲ್ಲಿ ಇರುವಂತಹ ಹೋಟೆಲ್. ನಾನು ಮೃತನ ಶವಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಜ್ವಲ್ ತನ್ನ ವಯಕ್ತಿಕ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರೆ ಆ ಬಗ್ಗೆ ನಾನು ಹೇಳಲಾಗುವುದಿಲ್ಲ. ಶವ ಪಂಚನಾಮೆ ಸ್ಥಳದಲ್ಲಿ ನಾನು ಹೇಳಿದಂತಹ ಪಂಚರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.